**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ**

**Spl. CASE: 41/2023**

**ಫ್ರಾ.ಸಾ. 2**
**ದೋ.ಸಾ. 2**

| | | |
|---|---|---|
| ಸಾಕ್ಷಿಯ ಹೆಸರು | : | ಮಂಜುನಾಥ್. ಎಸ್ |
| ತಂದೆಯ ಹೆಸರು | : | ಕೆ . ಶ್ರೀನಿವಾಸ್ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ಬಿಲ್ ಕೆಲೆಕ್ಟರ್ |
| ವಾಸ | : | ಚಿಕ್ಕಬಳ್ಳಾಪುರ |

**ದಿನಾಂಕ 23-12-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1). ನಾನು 1996 ನೇ ಸಾಲಿನಿಂದ 2020 ನೇ ಸಾಲಿನ ತನಕವಾಟರ್ ಮ್ಯಾನ್ ಆಗಿ ಹಾಗಾ ಕಂದವಾರ ಗ್ರಾಮದ ಬಿಲ್ ಕಲೆಕ್ಟರ್ ಆಗಿ ಕೆಲಸ ಮಾಡಿರುತ್ತೇನೆ.

2. ದಿನಾಂಕಃ 20-09-2022 ರಂದು ನಮ್ಮ ನಗರ ಸಬೆ ಕಮೀಷನರ್ ರವರು ದೂರವಾಣಿ ಕರೆ ಮಾಡಿ ಕಂದವಾರ ಗ್ರಾಮಕ್ಕೆ ಹೋಗಿ, ಅಲ್ಲಿ ಪೋಲೀಸರು ಮತ್ತು ತಹಸೀಲ್ದಾರ್ ರವರು ಇದ್ದು ಅವರಿಗೆ ತನಿಖೆಗೆ ಸಹಕರಿಸುವಂತೆ ತಿಳಿಸಿದ ಮೇರೆಗೆ ನಾನು ಮಃ 01-00 ರಿಂದ 01-30 ರ ವೇಳೆಗೆ ಅಲ್ಲಿಗೆ ಹೋಗಿರುತ್ತೇನೆ. ಅಲ್ಲಿಗೆ ಹೋದಾಗ ಪೋಲೀಸರು ಕೆಲವು ದಾಖಲೆಗಳಿಗೆ ನನ್ನ ಸಹಿಗಳನ್ನು ಪಡೆದುಕೊಂಡು ನನ್ನನ್ನು

ಹೋಗುವಂತೆ ತಿಳಿಸಿರುತ್ತಾರೆ. ನನ್ನ ಸಹಿಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನಿಪಿ–4 ಮತ್ತು 5 ರ ದಾಖಲೆಗಳಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು **ನಿಪಿ–4 (ಬಿ) ಮತ್ತು 5 (ಸಿ)** ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿ ಪೋಲೀಸರು ,ತಹಸೀಲ್ದಾರ್ ರವರು ಹಾಗೂ ಜಮೀನಿನ ಮಾಲೀಕರು ಇದ್ದು, ಪೋಲೀಸರು ಗಾಂಜಾ ಗಿಡಗಳನ್ನು ಹಿಡಿದು ಅಳತೆ ಮಾಡುತ್ತಿದ್ದರು. ಸದರಿ ಗಿಡಗಳು ದೊಡ್ಡ ಗಿಡಗಳಾಗಿದ್ದವು. ನಾನು ಆರೋಪಿಯನ್ನು ಆ ದಿನ ಸರಿಯಾಗಿ ಗುರುತಿಸಿರುವುದಿಲ್ಲ. ಸಾಕ್ಷಿ ನಿಪಿ–6 ರ ಪೋಟೋಗಳನ್ನು ನೋಡಿ ಅದರಲ್ಲಿ ತಾನು ಕಂಡುಬರುತ್ತಿಲ್ಲ ಎಂದು ನುಡಿದಿರುತ್ತಾರೆ. ನಿಪಿ–5 ರ ವಿವರಗಳು ನನಗೆ ತಿಳಿದಿರುವುದಿಲ್ಲ. ಈ ಕೇಸಿನ ಸಂಬಂದ ಪೋಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುವುದಿಲ್ಲ. ನನ್ನ ಜೊತೆ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ತಿಳಿದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು.)**

**<u>ಪಾಟೀಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>**

3. ದಿನಾಂಕಃ 20–09–2022 ರಂದು ನಾನು, ನಮ್ಮ ಮೇಲಾಧಿಕಾರಿಗಳ ನಿರ್ದೇಶನದಂತೆ ನಾನು ಚಿಕ್ಕಬಳ್ಳಾಪುರ ಡಿಸಿಬಿ /ಸಿಇಎನ್ ಪೋಲೀಸ್ ಠಾಣೆ ಬಳಿ ಹೋಗಿದ್ದು, ಅಲ್ಲಿಂದ ಘಟನಾ ಸ್ಥಳದ ಬಳಿ ಹೋಗಿ ಘಟನಾ ಸ್ಥಳದಲ್ಲಿ ಗಾಂಜಾ ಗಿಡಗಳನ್ನು ಬೆಳೆದಿರುವುದನ್ನು ಖಚಿತ ಪಡಿಸಿಕೊಂಡು ಫ್ರಾಸಾ–1 ರವರು,

ಆರೋಪಿಯನ್ನು ಸ್ಥಳಕ್ಕೆ ಕರೆಸಿಕೊಂಡು ನನ್ನ ಹಾಗೂ ಮತ್ತೊಬ್ಬ ಪಂಚ ಸಾಕ್ಷಿಯಾದ ಶ್ರೀದರ್ ರವರಿಗೆ ಸ್ಥಳದಲ್ಲಿ ನೋಟೀಸ್ ಜಾರಿ ಮಾಡಿ ಪಂಚರಾಗಿ ಸಹಕರಿಸುವಂತೆ ಕೋರಿಕೊಂಡ ಮೇರೆಗೆ ನಾವು ಒಪ್ಪಿದ್ದು, ಆ ನಂತರ ಚಾಸಾ–4 ತಹಸೀಲ್ದಾರ್ ಹಾಗೂ ನಮ್ಮೆಲ್ಲರಾ ಸಮಕ್ಷಮ ಆರೋಪಿಯವರ ಜಮೀನನಲ್ಲಿ ಬೆಳೆದಿದ್ದ 5 ಗಾಂಜಾ ಗಿಡಗಳನ್ನು ಮುಂದಿನ ಕ್ರಮಕ್ಕಾಗಿ ಜಪ್ತು ಪಡಿಸಿಕೊಂಡು ನಿಪಿ5 ರಂತೆ ಪಂಚನಾಮೆಯನ್ನು ಸ್ಥಳದಲ್ಲಿ ಜರುಗಿಸಿ ಸಹಿ ಪಡೆದುಕೊಂಡರು ಎಂದರೆ, ಸಾಕ್ಷಿಯು ನಾನು ಸ್ಥಳದಲ್ಲಿದ್ದೆ ಆದರೇ ಬೇರೆ ವಿಚಾರ ತಿಳಿದಿಲ್ಲ ಎಂದು ನುಡಿದಿರುತ್ತಾರೆ. ಸದರಿ 5 ಗಿಡಳನ್ನು ಕಿತ್ತು ನೋಡಲಾಗಿ ಅವು 4 ರಿಂದ 4 1/2 ಅಡಿ ಉದ್ದ ಬೆಳೆದಿದ್ದು ಅದರ ಕಾಂಡವು ಸುಮಾರು 1/2 ಇಂಚು ದಪ್ಪ ಇದ್ದು, ಅವುಗಳಲ್ಲಿ 8–10 ರೆಂಬೆಗಳು ಇದ್ದು, ಅವುಗಳನ್ನು ತೂಕ ಮಾಡಲಾಗಿ 10 ಕೆಜಿ 136 ಗ್ರಾಂ ಇದ್ದು, ಅದರ ಮಾರಕಟ್ಟೆ ಬೆಲೆ 3 ಲಕ್ಷ ರೂ ಗಳಾಗಬಹುದು ಎಂದು ಪಂಚನಾಮೆ ಬರೆಯಲಾಗಿದೆ ಎಂದರೆ, ಸಾಕ್ಷಿಯ ಒಂದು ದೊಡ್ಡ ಗಿಡವನ್ನು ನೋಡಿರುವುದಾಗಿ ನುಡಿಯುತ್ತಾರೆ. ಆ ನಂತರ ಸದರಿ ಗಿಡಗಳನ್ನು ಒಂದು ಪ್ಲಾಸ್ಟಿಕ್ ಚೀಲದಲ್ಲಿ ತುಂಬಿ, ಹೊಲೆದು, ಪ್ಯಾಕ್ ಮಾಡಿ, ಸೀಲ್ ಮಾಡಿ ಮುಂದಿನ ಕ್ರಮಕ್ಕಾಗಿ ಮಾಲು ಹಾಗೂ ಆರೋಪಿಯನ್ನು ಪೋಲೀಸರು ವಶಕ್ಕೆಪಡೆದು ಕೊಂಡು, ಸಹಿಗಳುಳ್ಳ ಚೀಟಿಗಳನ್ನು ಅಂಟಿಸಿದರು ಎಂದರೆ ಸರಿ. ಆ ಕಾಲಕ್ಕೆ ನಿಪಿ–6 ರ ಭಾವ ಚಿತ್ರಗಳನ್ನು ತೆಗೆದರು ಹಾಗೂ ನಾನು ಸಹ ಸದರಿ ಭಾವ ಚಿತ್ರದಲ್ಲಿ ಕಂಡು ಬರುತ್ತೇನೆ ಎಂದರೆ ಸರಿ. ಆ ನಂತರ ಠಾಣೆಯಲ್ಲಿ ವಿಚಾರ ಮಾಡಿದ್ದು ನಾನು ತನಿಖಾಧಿಕಾರಿಗಳ ಮುಂದೆ "**ನಾನು ಅಕ್ರಮವಾಗಿ ಗಾಂಜಾಗಿಡಗಳನ್ನು ಬೆಳೆದಿದ್ದ ಸ್ಥಳಕ್ಕೆ ಪೋಲೀಸ್ ಸಿಬ್ಬಂದಿ ಮತ್ತು ಪಂಚರಾದ ಶ್ರೀದರ್ ಎಸ್ ರವರು ಘಟನಾ ಸ್ಥಳಕ್ಕೆ ಸರ್ಕಾರಿ ಜೀಪ್ ಸಂಖ್ಯೆ ಕೆಎ–40 ಜಿ 63 ರಲ್ಲಿ ಕಂದವಾರ ಗ್ರಾಮಕ್ಕೆ ಹೋಗಿ, ಮಣ್ಣಿನ ರಸ್ತೆಯಲ್ಲಿ ಸ್ವಲ್ಪ ದೂರ ಹೋಗಿದ್ದು, ಆರೋಪಿಯ ಜಮೀನಿನಲ್ಲಿ ರೋಜಾ ಮತ್ತು ಕನಕಾಂಬರ ಹೂ ಗಿಡಗಳ ಮದ್ಯೆ ಗಾಂಜಾ ಗಿಡಗಳು ಎತ್ತರವಾಗಿ ಬೆಳೆದಿರುವುದು ಕಂಡು ಬಂದಿದ್ದು,**

ತನಿಖಾಧಿಕಾರಿಗಳು ತಮ್ಮ ಇಬ್ಬರೂ ಪೋಲೀಸ್ ಸಿಬ್ಬಂದಿಗಳನ್ನು ಸದರಿ ಜಮೀನಿನ ಮಾಲೀಕರನ್ನು ಪತ್ತೇ ಮಾಡಿ ತಂದು ಹಾಜರುಪಡಿಸುವಂತೆ ನೇವಿಸಿದ್ದು, ಸದರಿರವರು ಸದರಿ ಜಮೀನಿನ ಮಾಲೀಕರಾದ ವೇಣುಗೋಪಾಲ್ ರವರನ್ನು ಅವರ ಮನೆಯ ಬಳಿ ವಶಕ್ಕೆ ಪಡೆದು ತಂದು ಹಾಜರುಪಡಿಸಿದ್ದು, ಸದರಿ ವ್ಯಕ್ತಿ ನಮ್ಮಗಳನ್ನು ನೋಡಿ ಗಾಭರಿ ಗೊಂಡು ನೀವೆಲ್ಲಾ ಯಾರು ಎಂದು ಕೇಳಿದ್ದು, ತನಿಖಾಧಿಕಾರಿಯು ಶರತ್ ಕುಮಾರ್ ಪ್ರಾಸಾ –1 ರವರು ತಮ್ಮ ಗುರುತಿನ ಚೀಟಿ ತೋರಿಸಿ ನಾವು ಸಿಇಎನ್ ಅಫರಾದ ಪೋಲೀಸರು ಎಂದು ತಮ್ಮ ಪರಿಚಯ ಮಾಡಿಕೊಟ್ಟಿದ್ದು ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ಕೆಎ ವೇಣು ಗೋಪಾಲ್ ಬಿನ್ ಸತ್ಯನಾರಾಯಣ, 39 ವರ್ಷ, ಬಲಜಿಗರು, ಕಂದವಾರ ಗ್ರಾಮ ಎಂದು ತಿಳಿಸಿದ್ದು, ನಂತರ ಪ್ರಾಸಾ–1 ರವರು ಗಾಂಜಾ ಗಿಡಗಳನ್ನು ಬೆಳೆಯಲು ನಿಮ್ಮ ಬಳಿ ಪರವಾನಿಗೆ ಇದೆಯಾ? ಗಾಂಜಾಗಿಡಗಳನ್ನು ಏತಕ್ಕಾಗಿ ಬೆಳೆದಿರುತ್ತೀರಿ ಎಂದು ಕೇಳಲಾಗಿ ಆತನು ತನ್ನ ಬಳಿ ಯಾವುದೇ ಅನುಮತಿ ಇಲ್ಲ ಹಾಗೂ ಗಾಂಜಾ ಗಿಡಗಳನ್ನು ಮಾರಾಟ ಮಾಡಿ ಹಣ ಪಡೆಯುವ ಉದ್ದೇಶದಿಂದ ಬೆಳೆದಿರುವುದಾಗಿ ತಿಳಿಸಿದ್ದು, ನಂತ ಪ್ರಾಸಾ – 1 ರವರು ಸದರಿ ಗಂಜಾ ಗಿಡಗಳನ್ನು ಅಮಾನತ್ತು ಪಡಿಸಿ ಮುಂದಿನ ಕ್ರಮ ಜರುಗಿಸಿ ಕೊಡುವಂತೆ ತಹಸೀಲ್ದಾರ್ ರವರಿಗೆ ಕೋರಿದ್ದು , ಅದರಂತೆ ಸದರಿ ಆಸಾಮಿಗೆ ಕೆಲವು ಪ್ರಶ್ನೆ ಗಳನ್ನು ಕೇಳಿ ನಂತರ ಅವರು ಜಮೀನಿನಲ್ಲಿಗ ರೋಜ ಗಿಡಗಳು ಹಾಗೂ ಕನಕಾಂಬರ ಗಿಡಗಳ ಮಧ್ಯೆ ಬೆಳೆದಿದ್ದ ಗಾಂಜಾಗಿಡಗಳನ್ನು ಬೇರು ಸಮೇತ ಚನಿಕೆಯಿಂದ ಆತನ ಕೈಯಿಂದ ಕೀಳಿಸಿ ಒಂದು ಬಿಳಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ದಾರದಿಂದ ಹೊಲೆದು ಅರಗಿನ ಸಹಾಯದಿಂದ " ಎನ್" ಎಂಬ ಅಕ್ಷರದಿಂದ ಸೀಲು ಮಾಡಿ, ಅದರ ಮೇಲೆ ಪಂಚರಾದ ನಾವು ಮತ್ತು ತನಿಖಾಧಿಕಾರಿಗಳ ಸಹಿಗಳುಳ್ಳ ಚೀಟಿಯನ್ನು ಅಂಟಿಸಿ, ಪ್ರಾಸಾ–1 ರವರು ಅಮಾನತ್ತು ಪಡಿಸಿಕೊಂಡ ಹಸಿ ಗಾಂಜಾ ಗಿಡಗಳು ಹಾಗೂ ಆರೋಪಿಯನ್ನು ಅವರ ವಶಕ್ಕೆ ಪಡೆದಿದ್ದು, ತಹಸಿಲ್ದಾರ್ ರವರು ಆರೋಪಿ ವಿರುದ್ಧ ಸಿಇ ಎನ್ ಪೋಲೀಸ್ ಠಾಣೆಯಲ್ಲಿ

**ಪ್ರಕರಣ ದಾಖಲಿಸಿ ಮಾಡಿರುತ್ತಾರೆ ಹಾಗೂ ಆರೋಪಿಯನ್ನು ಮತ್ತು ವಶಪಡಿಸಿಕೊಂಡ ಗಾಂಜಾ ಮಾಲನ್ನು ಪುನಃ ನೋಡಿದರೆ ಗುರುತಿಸುತ್ತೇನೆ"** ಎಂದು ಈಗ ಓದಿ ಹೇಳಿ ಸೂಚಿಸಿದಂತೆ ತನಿಖಾಧಿಕಾರಿಗಳ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗೆಳೆದ ತನ್ನ ಹೇಳಿಕೆಯ ಭಾಗವನ್ನು ನಿಪಿ-8 ಎಂದು ಗುರುತಿಸಲಾಯಿತು.ಎಲ್ಲಾ ವಿಚಾರಗಳು ಗೊತ್ತಿದ್ದರೂಾ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು ಆರೋಪಿತರ ಪರ ಶ್ರೀ ಆರ್ ಜಿ ರವರಿಂದ</u>**

4. ನಿಪಿ-6 ರ ಪೋಟೋಗಳಲ್ಲಿ ಕಾಣುವ ಸ್ಥಳಕ್ಕೆ ನಾನು ಹೋಗಿದ್ದೆ. ಸದರಿ ಸ್ಥಳ ಯಾರಿಗೆ ಸೇರಿದ್ದು ಎಂದು ನನಗೆ ತಿಳಿದಿಲ್ಲ. ನಾನು ಸ್ಥಳಕ್ಕೆ ಹೋದಾಗ ಮಃ 01-15 ರಿಂದ 01-30 ಸಮಯವಾಗಿತ್ತು. ನಿಪಿ-5 ರ ಪಂಚನಾಮೆಯಲ್ಲಿರುವ ವಿಚಾರಗಳು ನನಗೆ ತಿಳಿದಿಲ್ಲ. ನಾನು ಸಹಿ ಮಾಡುವ ಕಾಲಕ್ಕೆ ನಿಪಿ-5 ರಲ್ಲಿ ಬರವಣಿಗೆ ಆಗಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-5 ಅನ್ನು ನನಗೆ ಓದಿ ಹೇಳಿರುವುದಿಲ್ಲ, ಕೇವಲ ಸಹಿ ಪಡೆದಿರುತ್ತಾರೆ. ನಗರ ಸಭೆ ಕಮೀಷನರ್ ರವರು ನನಗೆ ಮೌಖಿಕವಾಗಿ ಪಂಚನಾಮೆಗೆ ಹೋಗಲು ತಿಳಿಸಿದ್ದರು. ನಾನು ಸ್ಥಳಕ್ಕೆ ಹೋದಾಗ ಅಲ್ಲಿದ್ದವರ ಹೆಸರುಗಳನ್ನು ನನಗೆ ಹೇಳಲಾಗುವುದಿಲ್ಲ. ಶೆಡ್ ಬಳಿ ಇದ್ದ ಗಿಡವನ್ನು ತೂಕ ಹಾಕಿದ್ದರು. ದೊಡ್ಡ ಗಿಡದ ಜೊತೆ ಚಿಕ್ಕ ಚಿಕ್ಕ 2 ಗಿಡಗಳು ಇದ್ದವು. ಸದರಿ ಗಿಡಗಳನ್ನು ಎಲ್ಲಿಂದ ತಂದರು ಎಂದು ನೋಡಿಲ್ಲ ಎಂದರೆ ಸಾಕ್ಷಿಯ ಶೆಡ್ ಹಿಂದೆ ಬೆಳೆದಿದ್ದವು, ನನ್ನನ್ನು ಅಲ್ಲಿಯೇ ಇರುವಂತೆ ಹೇಳಿ ಅವುಗಳನ್ನು ತಂದಿದ್ದರು. ನಿಪಿ-4 ಮತ್ತು 5 ರ ದಾಖಲೆಗಳಿಗೆ ನಾನು ನಗರ ಸಭೆ ಕಛೇರಿಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಎಷ್ಟೆಷ್ಟು ತೂಕ ಇದ್ದವು ಎಂದು ನನ್ನಿಂದ ಹೇಳಲಾಗುವುದಿಲ್ಲ. ನಿಪಿ-6 ರ ಪೋಟೋದಲ್ಲಿ ಬರವಣಿಗೆ ಮಾಡುವುದು , ತುಾಕ ಮಾಡುವುದು ಕಂಡು ಬರುವುದಿಲ್ಲ ಎಂದರೆ ಸರಿ . ನಿಪಿ-6 ರ ಪೋಟೋದಲ್ಲಿ ನಾನು ಇಲ್ಲ ಎಂದರೆ ಸರಿ. ನಾನು ಸ್ಥಳಕ್ಕೆ ಹೋಗಿಲ್ಲದ ಕಾರಣ ನಿಪಿ-6 ರ

ಪೋಟೋದಲ್ಲಿ ಕಂಡುಬರುವುದಿಲ್ಲ ಎಂದರೆ ಸರಿಯಲ್ಲ.  ಪೋಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ನಾನು ನ್ಯಾಯಾಲಯದಲ್ಲಿ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿ.  ನನ್ನ ಸಮಕ್ಷಮ ಯಾವುದೇ  ಗಾಂಜಾ ಗಿಡವನ್ನು ಕಿತ್ತಿಲ್ಲ , ಜಪ್ತು ಪಡಿಸಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-
**(ಟಿ. ಪಿ. ರಾಮಲಿಂಗೆ ಗೌಡ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**